
REVIEW OF RESEARCH
ISSN: 2249-894X
IMPACT FACTOR : 3.8014 (UIF)
VOLUME - 6 | ISSUE - 6 | MARCH – 2017

# ಬಸವಕಲ್ಯಾಣದ ಸಾಂಸ್ಕೃತಿಕ ಚಿತ್ರಣ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ .

ಹನ್ನೆರಡನೇಯ ಶತಮಾನದಲ್ಲಿಯೇ ಸಮಾಜ ಸುಧಾರಣೆಯ ದೀವಿಗೆಯನ್ನು ಬೆಳಗಿಸಿದ ಬಸವಣ್ಣನವರ ಕಾರ್ಯ ಕ್ಷೇತ್ರವೂ ಆಗಿರುವ ಗಡಿಜಿಲ್ಲೆ ಬೀದರನ ಬಸವಕಲ್ಯಾಣ. ಅಂದು ಹನ್ನೆರಡನೇಯ ಶತಮಾನದಲ್ಲಿ ಬಸವಣ್ಣನವರು ನೇತೃತ್ವ ವಹಿಸಿ ಧರೆಯ ಮೇಲಿನ ಸ್ವರ್ಗವಾಗಿ ಮಾರ್ಪಡಿಸಿದರು. ಎಲ್ಲಾ ಜಾತಿ ಪಂಗಡದ ಶರಣರು ಒಂದುಗೂಡಿ ಶುದ್ಧ ಶೀಲವಾದ ಸಮಾಜವನ್ನು ಕಟ್ಟಲು ಪ್ರಯತ್ನಿಸಿದರು. ರಾಜಮಹಾರಾಜರು ಸಹ ರಾಜ್ಯವನ್ನು ತ್ಯಜಿಸಿ ಶರಣರಾಗಿ ಕಲ್ಯಾಣದಲ್ಲಿ ಬಂದು ನೆಲೆಸಿದರು. ಅಂಥಹ ವಿಶ್ವವಿಖ್ಯಾತ ಕಲ್ಯಾಣ ಬಸವಣ್ಣನವರ ನೇತೃತ್ವದಲ್ಲಿ ಆದ ಅಂರ್ತಜಾತಿ ವಿವಾಹದಿಂದ ಕೋಮು ಗಲಭೆ ಪ್ರಾರಂಭವಾಗಿ ಶರಣರು ಕಲ್ಯಾಣವನ್ನು ಬಿಟ್ಟು ಬೇರೆ ಬೇರೆ ಕಡೆ ಹೋಗಿ ನೆಲೆಸಿದರು. ಪ್ರಸ್ತುತ ಸಂದರ್ಭದಲ್ಲಿ ಅಂದು ಅವರು ಸ್ಥಾಪಿಸಿದ ಅನುಭವ ಮಂಟಪ, ಇಂದಿಗೂ ರಾರಾಜಿಸುತ್ತಿದೆ.

ಪ್ರಸ್ತುತವಾಗಿ ಕಾಣುವ ಶರಣ ಸ್ಮಾರಕಗಳು ಒಂದೊಂದಾಗಿ ನೋಡೋಣ, ಬಸವಕಲ್ಯಾಣದ ಒಳ ಪ್ರವೇಶಿಸುವ ಸಂದರ್ಭದಲ್ಲಿ ಭವ್ಯವಾದ ಬಂಗಲೆ ಇದೆ. ಇದನ್ನು ಜನಪದರು ಬಂಗ್ಲಾ ಎಂದೇ ಗುರುತಿಸುತ್ತಾರೆ (ಹುಮನಾಬಾದದಿಂದ) ಮುಂದೆ ಸ್ವಲ್ಪ ದೂರದಲ್ಲಿಯೇ



ತ್ರಿಪುರಾಂತ ಕೆರೆಯ ಹರಿಯಗುಂಟ ಬಂದವರ ಓಣಿ ಇದೆ.

1 ಬಸವಕಲ್ಯಾಣದ ಪಟ್ಟಣದಲ್ಲಿರುವ ನಾಲ್ಕು ದಿಕ್ಕುಗಳಲ್ಲಿ (2–5 ಕಿ.ಮೀ. ದೂರದಲ್ಲಿ) ಹಬ್ಬಿಕೊಂಡಿರುವ ಶರಣ ಸ್ಮಾರಕಗಳು.
ಅ. ಪಶ್ಚಿಮ ದಿಕ್ಕು : ತ್ರಿಪುರಾಂತ ಕೆರೆಯ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಶರಣ ಸ್ಮಾರಕಗಳು.
ಬ. ದಕ್ಷಿಣ ದಿಕ್ಕು : ತ್ರಿಪುರಾಂತ ಕೆರೆಯ ಹರಿಯಗುಂಟ ಮತ್ತು ಬಂದವರ ಓಣಿ ಪರಿಸರದಲ್ಲಿರುವ ಶರಣ ಸ್ಮಾರಕಗಳು.
ಕ. ಪೂರ್ವ ದಿಕ್ಕು : ಶಿವಪುರ ಮತ್ತು ನಾರಾಯಣಪುರಗಳಲ್ಲಿರುವ ಶರಣ ಸ್ಮಾರಗಳು.
ಡ. ಉತ್ತರ ದಿಕ್ಕು : ಬೆಟ್ಟಬಲಕುಂದ ಊರು, ಬೆಟ್ಟ ಮತ್ತು ಗುಡ್ಡದ ವಾರೆಗಳಲ್ಲಿರುವ ಶರಣಸ್ಮಾರಕಗಳು.

ಬಸವಕಲ್ಯಾಣದಲ್ಲಿ ಪರಿಸರದಲ್ಲಿ ಈಗ ಗುರುತಿಸಿರುವಂತೆ 70 ಕ್ಕೂ ಮೇಲ್ಪಟ್ಟು ಶರಣ ಸ್ಥಳಗಳಿವೆ. ಈಗ ನೋಡಲು ದೊರೆಯ ಬಹುದಾದ ಮಹತ್ವದ ಬಸವಣ್ಣನವರ ದೇವಾಲಯ. ಬಸವಕಲ್ಯಾಣದಲ್ಲಿ ಶರಣರಿಗೆ ಸಂಬಂಧಿಸಿದಂತೆ ಉಳಿದುಕೊಂಡು ಬಂದ ಒಂದೇ ಒಂದು ಸ್ಥಳವೆಂದರೆ ಪರುಷಕಟ್ಟೆ. ಇದನ್ನು 'ಬಸವನಮಠ' ಎಂದು ಕರೆಯುತ್ತಾರೆ. ಈ ಪರುಷಕಟ್ಟೆಯಲ್ಲಿ ಬಸವಣ್ಣನವರು ಕುಳಿತು ಧನ ದಾಸೋಹ ಮಾಡುತ್ತಿದ್ದರು ಎಂದು ಹೇಳುತ್ತಾರೆ. ಜನಪದರ ಹಾಡಿನಲ್ಲಿಯು ಇದರ ಪ್ರಸ್ತಾಪವಿದೆ.

'ಕಲ್ಯಾಣ ಊರಾಗ ಪರುಷ ಕಟ್ಟಿ ಪವಿತ್ರ
ಬಸವಣ್ಣ ಮೆರೆದಂತ ಜಾಗದು / ಕೋಲೆನ್ನ ಕೋಲೆ'

ಮತ್ತೊಂದು ಸ್ಥಳ 'ಪೀರಪಾಶಾ ಬಂಗಲಾ' ಇದೊಂದು ಶೈವಪರಂಪರೆಯ ಸ್ವಾರಕವಾಗಿದೆ. ಇದು ಗ್ರಾಮದ ಮಧ್ಯದಲ್ಲಿದೆ, ಬಸವಣ್ಣನವರ ಗುಡಿಯ ಹಿಂದೆಯೇ ಇರುವ ಸ್ಥಳ. ಇಲ್ಲಿ ವಿಶೇಷವೆಂದರೆ ಈ ಮಸೀದಿಯ ಒಳಗಡೆ ನಂದಿಯ ಕಲ್ಲಿನ ಮಂಟಪವಿದೆ ಈಗಲೂ ನಂದಿ ವಿಗ್ರಹಗಳಿವೆ.

ಬಸವಕಲ್ಯಾಣದ ಕೋಟೆ ಚಾಲುಕ್ಯರ 1ನೇ ಸೋಮೇಶ್ವರನು 11ನೇ ಶತಮಾನದಲ್ಲಿ ಬಸವಕಲ್ಯಾಣವನ್ನು ರಾಜಧಾನಿಯನ್ನಾಗಿಸಿಕೊಂಡನು. ಬಹುಶಃ ಈತನೇ ಕಟ್ಟಿರಬಹುದಾಗಿದ್ದ ಕಲ್ಯಾಣದ ಮೊದಲಿನ ಕೋಟೆ 1050ರಲ್ಲಿ

ಚೋಳರ ದಾಳಿಗೆ ತುತ್ತಾಗಿ ಸಂಪೂರ್ಣವಾಗಿ ಭಸ್ಮವಾಯಿತು. 1050–1080ರ ಈ 30 ವರ್ಷಗಳ ಅವಧಿಯಲ್ಲಿ 1ನೇ ಸೋಮೇಶ್ವರ ಮತ್ತು ಅವನ ಮಗ 6ನೇ ವಿಕ್ರಮಾದಿತ್ಯನ ಪ್ರಾರಂಭದ ವರ್ಷಗಳಲ್ಲಿ ಈಗಿರುವ ಪ್ರಾಚೀನ ಭಾಗದ ಕೋಟೆ ನಿರ್ಮಾಣವಾಗಿರುವ ಸಾಧ್ಯತೆ ಇದೆ. 1040ರಲ್ಲಿ ಕಲ್ಯಾಣಕ್ಕೆ ಬಂದ ಚಾಲುಕ್ಯರು ಮುಂದೆ ಒಂದು ನೂರುವರ್ಷ ಆಳ್ವಿಕೆ ಮಾಡಿದರು. ಕೊನೆಯಲ್ಲಿ ಬಿಜ್ಜಳ ಮತ್ತು ಅವನ ವಂಶಜರಾದ ಕಲಚುರಿ ಮನೆತನದವರು ಆಳ್ವಿಕೆ ಮಾಡಿದರು. ಇಂದು ಕೋಟೆ ಶಿಥಿಲಾವಸ್ಥೆಯಲ್ಲಿದ್ದರೂ ಸುಂದರವಾಗಿ ಕಾಣುತ್ತದೆ.

'ಜೇಡರ ದಾಸಿಮಯ್ಯ–ದುಗ್ಗಳೆ ಮಠ' ಬಸವಕಲ್ಯಾಣದ ಶಹಾಪುರ ಓಣಿಯಲ್ಲಿ ಒಂದು ಮಠ ಉಳಿದುಕೊಂಡಿದೆ. ಜೇಡರ ದಾಸಿಮಯ್ಯ ಬಸವಣ್ಣನವರನ್ನು ಸ್ಮರಿಸಿಲ್ಲ ಆದರೆ ದುಗ್ಗಳೆ ತನ್ನ ವಚನಗಳಲ್ಲಿ ಬಸವಣ್ಣ, ಚೆನ್ನಬಸವಣ್ಣ, ಪ್ರಭುದೇವರು, ಮರುಳಶಂಕರದೇವರು, ಸಿದ್ಧರಾಮಯ್ಯ, ಅಜಗಣ್ಣ ಅವರನ್ನು ಮನದುಂಬಿ ಸ್ಮರಿಸುತ್ತಾಳೆ. ದಂಪತಿಗಳು ಕಲ್ಯಾಣಕ್ಕೆ ಬಂದು ಹೋಗಿರಬಹುದು ಎಂದು ಊಹಿಸಬಹುದು.

'ಶಂಕರದಾಸಿಮಯ್ಯ' ಬಸವಕಲ್ಯಾಣ ಪಟ್ಟಣದ ಸುಭಾಶಚೌಕ ಗಲ್ಲಿಯಲ್ಲಿ ಶಂಕರದಾಸಿಮಯ್ಯನ ಗುಡಿ ಇದೆ. 'ಅಂಬಿಗರ ಚೌಡಯ್ಯನವರ ಗುಡಿ' ಬಸವಣ್ಣನವರ ದೇವಾಲಯದ ಬಲಮಗ್ಗಲು ಕೋಳಿಗಲ್ಲಿಯಲ್ಲಿ ಇದೆ. ಇಲ್ಲಿ ಅಂಬಿಗರ ಚೌಡಯ್ಯನ ಪಾದಗಳಿವೆ.

'ಕಂಬಳಿನಾಗಿದೇವರ ಮಠ' ಇದು ಬಸವಕಲ್ಯಾಣದ ನಡು ಊರಿನಲ್ಲಿಯೇ ಇದೆ. 'ಉರಿಲಿಂಗ ಪೆದ್ದಿಮಠ' ಬಸವಕಲ್ಯಾಣದ ಹರಿಜನ ಓಣಿಯಲ್ಲಿ ಉರಿಲಿಂಗಪೆದ್ದಿ ಶರಣರಗವಿ ಇದೆ. ಇದನ್ನು ಮಠ ಎಂದೆ ಕರೆಯುತ್ತಾರೆ.

ತ್ರಿಪುರಾಂತ ಕೆರೆದಂಡೆಯ ಮೇಲೆ ಭಾಲ್ಕಿಯ ಚನ್ನಬಸವಪಟ್ಟದೇವರ ಪರಿಶ್ರಮದಿಂದ ಅನುಭವ ಮಂಟಪ ನಿರ್ಮಿಸಲಾಗಿದೆ. ಮಾತಾಜೀಯವರ ನೇತೃತ್ವದಲ್ಲಿ 108 ಅಡಿ ಬಸವೇಶ್ವರರ ಮೂರ್ತಿ ವಿಶ್ವವಿಖ್ಯಾತವಾಗಿದೆ. ಒಟ್ಟಾರೆ 60–80 ಅಡಿ ನಿವೇಶನದಲ್ಲಿ ನಿರ್ಮಿಸಿದ್ದು ಮೂರ್ತಿಯ ಎತ್ತರವೆ ಪಾದದಿಂದ ನೆತ್ತಿಯವರೆಗೆ ಒಟ್ಟು 108 ಅಡಿ ಪ್ರತಿಮೆ ಕೆಳಗೆ 24 ಅಡಿ ಎತ್ತರದ ಎರಡು ಅಂತಸ್ತಿನ ಕಟ್ಟಡವಿದೆ. ಈ ಪೈಕಿ ನೆಲ ಅಂತಸ್ತಿನ ಕೊಠಡಿಯಲ್ಲಿ ಬಸವಣ್ಣನವರ ವ್ಯಕ್ತಿ ಚಿತ್ರಣವನ್ನು ದೃಶ್ಯ–ಶ್ರಾವ್ಯ ಸಂಯೋಜನೆಯಲ್ಲಿ ವೀಕ್ಷಕರಿಗೆ ನೋಡಲು ಸಿದ್ಧಗೊಳಿಸಿದೆ. ಬಸವಣ್ಣನವರ ಬಾಲ್ಯದಿಂದ ಲಿಂಗೈಕ್ಯದವರೆಗೆ ಒಟ್ಟು 32 ಮುಖ್ಯ ಘಟನೆಗಳು ಇಲ್ಲಿ ಅನಾವರಣಗೊಂಡಿವೆ.

ಈ ಪುತ್ಥಳಿಯ ಶಿಲ್ಪಿ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲೂಕಿನ ಕೆ. ಶ್ರೀಧರ ಮೂರ್ತಿಯವರು. ಇದನ್ನು ರಚಿಸಲು ತೆಗೆದುಕೊಂಡ ಕಾಲ 8 ವರ್ಷ 1 ತಿಂಗಳು 28 ದಿವಸ ಹಿಡಿಯಿತು. ಒಟ್ಟು 2978 ದಿವಸ ತೆಗೆದುಕೊಳ್ಳಲಾಗಿದೆ. ಧರೆಯ ಮೇಲಿನ ಕೈಲಾಸದಂತೆ ಪೂಜ್ಯ ಮಾತಾಜೀಯವರು ನಿರ್ಮಿಸಿದ್ದಾರೆ. ನೆಲವನ್ನು ಕೊರೆದು ಗವಿಯನ್ನು ನಿರ್ಮಿಸಿ ಎಲ್ಲಾ ಶರಣ ಪ್ರತಿಮೆಗಳು ಗವಿಯಲ್ಲಿ ಕಾಣುತ್ತೇವೆ. ಒಟ್ಟು 770 ಅಮರಗಣಂಗಳ ಪರಿಚಯವನ್ನು ಮಾತಾಜೀಯವರು ನಮ್ಮೆಲ್ಲರಿಗೂ ಮಾಡಲು ಹೊರಟಿದ್ದಾರೆ. ಪ್ರತಿಯೊಬ್ಬ ಶರಣರ ಕಾಯಕದ ಜೊತೆಯಲ್ಲಿಯೆ ಅವರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವರು ಅದನ್ನು ನೋಡಲು ಎರಡು ಕಣ್ಣು ಸಾಲದು. ಪಾತಾಳಗಂಗೆಯಲ್ಲಿ ಬರುವ ಜಲ ಧಾರೆಯಂತೆ ಹೊಂಡದ ವ್ಯವಸ್ಥೆ ಕಾರ್ಯ ನಡೆಯುತ್ತಿದೆ. ಇದನ್ನು ಉಸ್ತುವಾರಿಯಾಗಿ ನೋಡಲು ಶರಣ ಶ್ರೀ ಬಸವಪ್ರಭು ಸ್ವಾಮಿಜೀಯವರ ನೇತೃತ್ವದಲ್ಲಿ ಇಂದು ನಡೆಯುತ್ತಿದೆ.

### ಅಡಿ ಟಿಪ್ಪಣಿಗಳು


1. **ಜಯಶ್ರೀ ದಂಡೆ ಹಾಗೂ ವೀರಣ್ಣ ದಂಡೆ (ಸಂ) : ಶರಣ ಸ್ಮಾರಕಗಳು : 2012. ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ .**
2. **ಡಾಕುಳಗಿ ಮಹಾರುದ್ರ : ಪ್ರಥಮಂತು ಬಸವಣ್ಣ . 2013 . ವಿಶ್ವಕಲ್ಯಾಣ ಮಿಷನ್ ಚಾರಿಟೇಬಲ್ ಟ್ರಸ್ಟ್ ಬೆಂಗಳೂರು.**
3. **ಚಂದ್ರಶೇಖರಯ್ಯ ಎಂ.ಜಿ. : ಬಸವಣ್ಣ ಜೀವನ – ಸಾಧನೆ . 2009 . ಕ.ಸಾ.ಪ. ಬೆಂಗಳೂರು.**
4. **ಸಂದರ್ಶನ : ದಿ:06–11–2013 ಸಮಯ ಬೆಳಗ್ಗೆ 11:00 ಗಂಟೆ : ಶ್ರೀ ಬಸವಪ್ರಭು ಸ್ವಾಮಿಜೀ, ಅಧ್ಯಕ್ಷರು ಬಸವಪೀಠ ಬಸವಕಲ್ಯಾಣ.**